# ಹುಸಿ ಅಹಂಕಾರಕ್ಕೆ ಪೆಟ್ಟು

> ದೈವದ ಪೂಜೆ- ಪ್ರಾರ್ಥನೆಗೆ ಸಂಬಂಧಿಸಿದಂತೆ ಗಂಡು ಹೆಣ್ಣಿನ ನಡುವೆ ವ್ಯತ್ಯಾಸವನ್ನು ಕಲ್ಪಿಸುವ ಮನೋಧರ್ಮ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆ ಎಂದು ಬಿಂಬಿಸುವ ಒಂದು ಬಗೆ.

ಧರ್ಮ ಹಾಗೂ ಲಿಂಗಭೇದದ ಹಿನ್ನೆಲೆಯಲ್ಲಿ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ಕಾಣುವ ಪುರುಷ ಪ್ರಾಧಾನ್ಯ ಸಮಾಜದ ಹುಸಿ ಅಹಂಕಾರಕ್ಕೆ ಸುಪ್ರೀಂ ಕೋರ್ಟ್ ಸರಿಯಾಗಿಯೇ ತಪರಾಕಿ ನೀಡಿದೆ. ಎಲ್ಲ ವಯೋಮಾನದ ಮಹಿಳೆಯರಿಗೆ ಶಬರಿಮಲೆ ದೇಗುಲ ಪ್ರವೇಶಕ್ಕೆ ಅವಕಾಶ ಕಲ್ಪಿಸಿರುವ ಸುಪ್ರೀಂ ಕೋರ್ಟ್ ಆದೇಶ ಪ್ರಜಾಪ್ರಭುತ್ವದ ಸಮಾನತೆಯ ಆಶಯವನ್ನು ಎತ್ತಿಹಿಡಿಯುವ ಹಾಗೂ ಲಿಂಗ ತಾರತಮ್ಯವನ್ನು ವಿರೋಧಿಸುವ ಕ್ರಮವಾಗಿದೆ. ಈ ಆದೇಶದ ಮೂಲಕ 10ರಿಂದ 50 ವರ್ಷದೊಳಗಿನ ಮಹಿಳೆಯರಿಗೆ ಪ್ರವೇಶ ನಿರಾಕರಿಸಿದ್ದ ಶಬರಿಮಲೆ ದೇಗುಲ ಆಡಳಿತ ಮಂಡಳಿಯ ಎಂಟು ಶತಮಾನಗಳ ಆಚರಣೆ ಕೊನೆಗೊಂಡಿದೆ.

ಹತ್ತರಿಂದ ಐವತ್ತು ವರ್ಷ ವಯಸ್ಸಿನ ಹೆಣ್ಣುಮಕ್ಕಳು ಮುಟ್ಟಾಗುವ ಕಾರಣದಿಂದಾಗಿ, ಪಾವಿತ್ರ್ಯದ ನೆಪವೊಡ್ಡಿ ಅವರನ್ನು ದೇಗುಲದಿಂದ ಹೊರಗಿಡಲಾಗಿತ್ತು. ಋತುಸ್ರಾವದ ಕಾರಣದಿಂದಾಗಿ ಹೆಣ್ಣನ್ನು ಮೈಲಿಗೆಯೆಂದು ಕೀಳಾಗಿ ಕಾಣುವುದು ಅಥವಾ ಆಕೆಯಿಂದ ಮಾಲಿನ್ಯ ಉಂಟಾಗುತ್ತದೆಂದು ಭಾವಿಸುವುದು ಆಕೆಯ ಘನತೆಯನ್ನು ಕುಗ್ಗಿಸುವ ನಡವಳಿಕೆ. ‘ಅಪವಿತ್ರ ಎನ್ನುವ ಕಾರಣವನ್ನು ನೀಡಿ ಹೆಣ್ಣನ್ನು ಹೊರಗಿಡುವುದು ಕೂಡ ಒಂದು ಬಗೆಯ ಅಸ್ಪೃಶ್ಯತೆ’ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟ ಮಾತುಗಳಲ್ಲಿ ಹೇಳಿದೆ. ಆಚರಣೆಯ ಹೆಸರಿನಲ್ಲಿ ಪ್ರಾರ್ಥನೆಯ ಹಕ್ಕನ್ನು ನಿರಾಕರಿಸಲಾಗದು ಎನ್ನುವ ನ್ಯಾಯಾಲಯದ ಆದೇಶ, ಹೆಣ್ಣನ್ನು ದೂರವಿಟ್ಟುವಿರುವ ದೇಶದ ಇತರ ಪ್ರಾರ್ಥನಾಮಂದಿರಗಳಿಗೂ ನೀಡಿರುವ ಎಚ್ಚರಿಕೆಯ ಸಂದೇಶವಾಗಿದೆ.

ಶಬರಿಮಲೆಗೆ ಸಂಬಂಧಿಸಿದ ತೀರ್ಪು ದೇಗುಲವೊಂದರ ಪ್ರವೇಶಕ್ಕೆ ಸೀಮಿತವಾಗಿರದೆ, ಹೆಣ್ಣಿನ ಕುರಿತು ಸಮಾಜದ ಒಟ್ಟಾರೆ ದೃಷ್ಟಿಕೋನದ ವಿಮರ್ಶೆಗೆ ಒತ್ತಾಯಿಸುವಂತಿದೆ. ದೈವದ ಪೂಜೆ– ಪ್ರಾರ್ಥನೆಗೆ ಸಂಬಂಧಿಸಿದಂತೆ ಗಂಡು ಹೆಣ್ಣಿನ ನಡುವೆ ವ್ಯತ್ಯಾಸವನ್ನು ಕಲ್ಪಿಸುವ ಮನೋಧರ್ಮ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆ ಎಂದು ಬಿಂಬಿಸುವ ಒಂದು ಬಗೆ. ಸಂಸತ್‌ನಲ್ಲಿ ಮಹಿಳೆಯರಿಗೆ ಶೇ. 33ರ ಪ್ರಾತಿನಿಧ್ಯ ಕಲ್ಪಿಸುವ ಮಸೂದೆ ನನೆಗುದಿಯಲ್ಲಿರುವುದು ಕೂಡ ಶೋಷಣೆಯ ಪರೋಕ್ಷ ರೂಪವೇ. ಹೆಣ್ಣನ್ನು ಮಾಯೆಯೆಂದು ಬಗೆಯುವುದು, ಗಂಡಿನ ಪಾರಮಾರ್ಥಿಕ ಸಾಧನೆಗೆ ಹೆಣ್ಣು ಅಡ್ಡಿ ಎಂದು ಭಾವಿಸುವುದು ಶೋಷಣೆಯ ಇನ್ನೊಂದು ಬಗೆ. ಹಾಗೆ ನೋಡಿದರೆ ಗಂಡಿನ ಅಗತ್ಯವನ್ನು ಪೂರೈಸುವಲ್ಲಿ ತನ್ನ ಜೀವನವನ್ನೇ ಮುಡಿಪಾಗಿಡುವ ಹೆಣ್ಣು – ಪರದ ಮಾತಿರಲಿ, ಇಹದಲ್ಲಿನ ತನ್ನ ಇರವನ್ನೇ ಸರಿಯಾಗಿ ಅರಿಯುವುದು ಅನುಭವಿಸುವುದು ಸಾಧ್ಯವಾಗದಿರುವ ಸನ್ನಿವೇಶ ಇಂದಿನದು. ‘ಹೆಣ್ಣು ಮಾಯೆ’ ಎನ್ನುವ ಧೋರಣೆ ಪುರುಷರ ಠಕ್ಕುತನವೂ ಹೌದು, ಅಹಂಕಾರವೂ ಹೌದು. ಪುರುಷಪ್ರಜ್ಞೆಯ ಕೆಲವು ಧಾರ್ಮಿಕ ಕೇಂದ್ರಗಳಲ್ಲಿ ಅಂತಃಪುರಗಳೂ ಇರುವ ಪ್ರಕರಣಗಳು ಈಚೆಗೆ ಸುದ್ದಿಯಾಗುತ್ತಿರುವುದು ಈ ಠಕ್ಕುತನಕ್ಕೆ ನಿದರ್ಶನದಂತಿದೆ.

ತಾವು ಮುಂದುವರೆದವರು ಎಂದು ಬೀಗುವ ಕೆಲವು ಸಮುದಾಯಗಳಲ್ಲಿ ಈಗಲೂ ಹೆಣ್ಣುಮಕ್ಕಳನ್ನು ಮುಟ್ಟಿನ ದಿನಗಳಲ್ಲಿ ಕತ್ತಲ ಕೋಣೆಯಲ್ಲಿ ಇರಿಸುವುದಿದೆ. ಋತುಸ್ರಾವದ ಬಗ್ಗೆ ಹೆಣ್ಣು ಮುಜುಗರಪಡುವ, ಖಿನ್ನತೆ ಅನುಭವಿಸುವ ಸಂದರ್ಭ ಅನೇಕ ಕುಟುಂಬಗಳಲ್ಲಿದೆ. ದೆಹಲಿಯ ಜವಾಹರ್‌ಲಾಲ್ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿನಿ ಶೆಹ್ಲಾ ರಶೀದ್ ಋತುಸ್ರಾವದ ದಿನಗಳಲ್ಲಿ ಹೆಣ್ಣುಮಕ್ಕಳು ಅನುಭವಿಸುವ ಅತೀವ ಖಿನ್ನತೆಯ ಕುರಿತು ತಮ್ಮ ವೈಯಕ್ತಿಯ ಅನುಭವಗಳ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಕುಟುಂಬದವರ ಸಹಾನುಭೂತಿ ಹಾಗೂ ಸಹಕಾರವನ್ನು ಬಯಸುವ ಇಂಥ ಸಂಗತಿಗಳು ಬಹುತೇಕ ಸಂದರ್ಭಗಳಲ್ಲಿ ಅವಹೇಳನದ ರೂಪದಲ್ಲಿ, ಇಲ್ಲವೇ ಹೆಣ್ಣನ್ನು ಬಲಹೀನಳೆಂದು ಚಿತ್ರಿಸುವ ರೂಪದಲ್ಲಿ ಕೊನೆಯಾಗುತ್ತವೆ. ಹಸಿ ಬಾಣಂತಿಯರನ್ನು ಊರಿನಿಂದ ಹೊರಗಿಡುವ ಆಚರಣೆಗಳೂ ಕೆಲವೆಡೆ ಇವೆ. ಸಂಪ್ರದಾಯದ ಹೆಸರಿನ ಇಂಥ ಮೂಢನಂಬಿಕೆಗಳ ವಿಮರ್ಶೆಗೆ ಶಬರಿಮಲೆ ಪ್ರಕರಣ ಒಂದು ನೆಪವಾಗಬೇಕು. ‘ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು ಅಡಕೆ ಫಲ ರಸ ದ್ರವ್ಯ ಮುಂತಾದ ದ್ರವ್ಯಕ್ಕೆ ವ್ರತವೊ? ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೊ’ ಎನ್ನುವ ಶರಣೆ ಅಕ್ಕಮನ ತಿಳಿವು ಈ ಹೊತ್ತಿನ ಎಲ್ಲರದಾಗಬೇಕು.

ಹೆಣ್ಣು–ಗಂಡು ಪರಸ್ಪರ ಸಹಕಾರ–ಸಹಾನುಭೂತಿ ಧೋರಣೆ ರೂಢಿಸಿಕೊಳ್ಳದೆ ಹೋದಲ್ಲಿ ನಾಗರಿಕತೆ, ಸಂಸ್ಕೃತಿ, ಸಂಪ್ರದಾಯ ಎನ್ನುವ ಎಲ್ಲವೂ ಅರ್ಥಹೀನವಾಗಿಬಿಡುತ್ತವೆ. ಹೆಣ್ಣನ್ನು ತನ್ನ ಸಮಾನ ಎಂದು ಗಂಡು ಭಾವಿಸುವುದು ಆಕೆಗೆ ಮಾಡುವ ಉಪಕಾರವೇನೂ ಅಲ್ಲ. ಎಷ್ಟೋ ಸಂದರ್ಭಗಳಲ್ಲಿ ಅದು ಗಂಡು ತನಗೆ ತಾನು ಒದಗಿಸಿಕೊಳ್ಳುವ ಅನುಕೂಲವೂ ಹೌದೆನ್ನುವುದಕ್ಕೆ ಈ ತಲೆಮಾರಿನ ಹೆಣ್ಣುಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವುದಕ್ಕೆ ಸೂಚನೆಯಂತಿದೆ.

■ ರಘುನಾಥ ಚ.ಹ.



ಈಶ್ವರ್